ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ,
ಹೆಚ್.ಡಿ.ಕೋಟೆ

ಸಿ.ಸಿ. ನಂ. 554/2017

ಫಿರ್ಯಾದಿ : ಸರ್ಕಾರದ ಪರವಾಗಿ ಬೀಚನಹಳ್ಳಿ ಪೋಲೀಸ್ ಠಾಣೆ

– ವಿರುದ್ಧ –

ಆರೋಪಿ : ವೆಂಕಟರಾಜು ಬಿನ್ ಗೋಪಾಲಯ್ಯ
24 ವರ್ಷ, ವಾಸಃ ಬೋರೇದೇವರಮಂಟಿ ಗ್ರಾಮ,
ಹೆಚ್.ಡಿ. ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

## ದೋಷಾರೋಪಣೆ

ಶ್ರೀ. ಸುರೇಶ ಎಸ್.ಎನ್., ಬಿ.ಎ.ಎಲ್., ಎಲ್.ಎಲ್.ಬಿ,, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಹೆಚ್.ಡಿ.ಕೋಟೆ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 19.01.2017 ರಂದು ಸಂಜೆ 7 ಗಂಟೆ ಸಮಯದಲ್ಲಿ ಬೀಚನಹಳ್ಳಿ ಪೋಲೀಸ್ ಠಾಣಾ ಸರಹದ್ದು, ಬೋರೇದೇವರಮಂಟಿ ಗ್ರಾಮದಲ್ಲಿ ಮೇಲ್ಕಂಡ ಆರೋಪಿಯಾದ ನೀವು ನಿಮ್ಮ ವಾಸದ ಮನೆಯಲ್ಲಿ ಸರ್ಕಾರದಿಂದ ಯಾವುದೇ ಪರವಾನಗಿ ಪಡೆಯದೆ 90 ಎಂ.ಎಲ್.ನ ವಿಂಡ್ಸರ್ ಡಿಲಕ್ಸ್ ವಿಸ್ಕಿಯ 50 ಪೌಚ್ ಗಳನ್ನು ಅಕ್ರಮವಾಗಿ ಲಾಭ ಹೊಂದುವ ಉದ್ದೇಶದಿಂದ ಅಕ್ರಮವಾಗಿ ಸಾರ್ವಜನಿಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದು, ಆ ಮೂಲಕ ಆರೋಪಿಯಾದ ನೀವು

ಕರ್ನಾಟಕ ಅಬಕಾರಿ ಕಾಯಿದೆ ಕಲಂ 34 ರಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಈ ಮೇಲಿನ ದೋಷಾರೋಪಣೆಗಳಿಗಾಗಿ ಆರೋಪಿತರಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದೆಂದು ನಿರ್ದೇಶಿಸಿರುತ್ತೇನೆ.

ಪ್ರಶ್ನೆ-1 : ಮೇಲೆ ಓದಿ ಹೇಳಿದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರ

ಪ್ರಶ್ನೆ–2:ಈ ಆರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರ

(ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿ ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 15.09.2022

(ಸುರೇಶ ಎಸ್.ಎನ್.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಹೆಚ್.ಡಿ. ಕೋಟೆ.